


## ‘ಟಾಕ್ಸಿಕ್’ಗೆ ಭರದ ಸಿದ್ಧತೆ

**ರಾಕಿಂಗ್** ಸ್ಟಾರ್ ಯಶ್ ಅಭಿನಯದ, ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ‘ಟಾಕ್ಸಿಕ್’ ಚಿತ್ರೀಕರಣ ಶೀಘ್ರದಲ್ಲೇ, ಅದೂ ಕರ್ನಾಟಕದಲ್ಲಿಯೇ ಆರಂಭಿಸಲು ಭರದ ಸಿದ್ಧತೆ ನಡೆಯುತ್ತಿದೆ.

ಯಶ್ ಪಾಲಿನ ಮತ್ತೊಂದು ಬಹು ದೊಡ್ಡ ಪ್ರಾಜೆಕ್ಟ್ ‘ಟಾಕ್ಸಿಕ್; ಎ ಫೇರಿ ಟೇಲ್ ಫಾರ್ ಗ್ರೋನಪ್ಸ್’ ಸಿನಿಮಾ. ಈಚೆಗಷ್ಟೆ ಈ ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ಸ್ಟನ್ನಿಂಗ್ ಗ್ರಾಫಿಕ್‌ಗಳು, ಹಾಗೇ ಸಂಗೀತದಿಂದ ಸಿನಿಮಾ ಬಗ್ಗೆ ಅಭಿಮಾನಿಗಳ ನಿರೀಕ್ಷೆ ಇನ್ನಷ್ಟು ಹೆಚ್ಚಿದೆ, ಸಿನಿಮಾ ಚಿತ್ರೀಕರಣಕ್ಕೂ ಸಿದ್ಧತೆಗಳು ನಡೆಯುತ್ತಿವೆ.

ಕರ್ನಾಟಕದಲ್ಲಿ ಇದರ ಚಿತ್ರೀಕರಣ ಶೀಘ್ರವೇ ಶುರುವಾಗಲಿದೆ ಎಂಬ ಮಾಹಿತಿ ತಿಳಿದುಬಂದಿದೆ. ದೇಶದ ಹಲವು ಭಾಗಗಳಲ್ಲಿ ಶೂಟಿಂಗ್ ನಡೆಸುವುದಿದ್ದರೂ, ಯಶ್ ಹಾಗೂ ಪ್ರೊಡಕ್ಷನ್ ತಂಡ, ಕರ್ನಾಟಕದಲ್ಲಿಯೇ ಈ ಸಿನಿಮಾದ ಮುಖ್ಯ ಕೆಲಸಗಳು ನಡೆಯಬೇಕೆಂದು ನಿರ್ಧರಿಸಿರುವುದಾಗಿ ತಿಳಿದುಬಂದಿದೆ. ಇದು ಕರ್ನಾಟಕವನ್ನು, ಕನ್ನಡ ಚಿತ್ರರಂಗವನ್ನು ಪ್ರೊಮೋಟ್ ಮಾಡಲೂ ನೆರವಾಗಲಿದೆ ಎನ್ನುವುದು ಚಿತ್ರತಂಡದ ಆಲೋಚನೆಯಂತೆ.

ಈ ಚಿತ್ರವನ್ನು ಮಲೆಯಾಳಂ ನಟಿ, ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶಿಸುತ್ತಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, 2025ರ ಏಪ್ರಿಲ್ 10ರಂದು ಬಿಡುಗಡೆಯಾಗಲಿದೆ.

ಯಶ್ ನಟನೆಯ ‘ಕೆ.ಜಿ.ಎಫ್. ಚಾಪ್ಟರ್–2’ ಬಿಡುಗಡೆಗೊಂಡಿದ್ದು 2022ರ ಏಪ್ರಿಲ್ 14ರಂದು. ಅದಾಗಿ ಮೂರು ವರ್ಷಗಳ ಬಳಿಕ ಯಶ್ ನಟನೆಯ ಈ ಹೊಸ ಸಿನಿಮಾ ಬಿಡುಗಡೆಯಾಗಲಿದೆ. ‘ಟಾಕ್ಸಿಕ್’, ಮತ್ತೊಂದು ದೊಡ್ಡ ಪ್ಯಾನ್ ಇಂಡಿಯಾ ಸಿನಿಮಾ ಇದಾಗಬಹುದೆಂಬ ನಿರೀಕ್ಷೆ ಅಭಿಮಾನಿಗಳಲ್ಲಿ ತುಂಬಿದೆ. ■

## ಆಶಿಕಾ ಹೊಸ ಸೂತ್ರ

**ಕನ್ನಡ** ಚಿತ್ರರಂಗದಿಂದ ಕೊಂಚ ಮರೆಯಾದಂತೆ ಕಾಣುತ್ತಿದ್ದ ನಟಿ ಆಶಿಕಾ ರಂಗನಾಥ್ ಅಭಿನಯದ ಎರಡು ಕನ್ನಡ ಸಿನಿಮಾಗಳು ಒಂದೇ ತಿಂಗಳಲ್ಲಿ ಬಿಡುಗಡೆಯಾಗುತ್ತಿವೆ. ಇದೇ ಏಪ್ರಿಲ್ 5ರಂದು ‘ಅವತಾರ ಪುರುಷ 2’ ಬಿಡುಗಡೆ ಕಂಡಿದ್ದು, ಏಪ್ರಿಲ್ 19ಕ್ಕೆ ಮತ್ತೊಂದು ಸಿನಿಮಾ ‘O2’ ಬಿಡುಗಡೆ ಆಗುತ್ತಿದೆ.

‘O2’, ಮೆಡಿಕಲ್ ಥ್ರಿಲ್ಲರ್ ಕಥೆಯಾಗಿದ್ದು, ಪಿಆರ್‌ಕೆ ಬ್ಯಾನರ್ ಅಡಿಯಲ್ಲಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ನಿರ್ಮಿಸಿದ್ದಾರೆ. ಪ್ರಶಾಂತ್ ರಾಜ್ ಮತ್ತು ರಾಘವ್ ನಾಯಕ್ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾದಲ್ಲಿ ‘ಶ್ರದ್ಧಾ’ ಪಾತ್ರದಲ್ಲಿ ಆಶಿಕಾ ಕಾಣಿಸಿಕೊಂಡಿದ್ದು, ತಮಗೆ ಸಿಕ್ಕಿರುವ ಈ ಅವಕಾಶದ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ತಾವು ಹಿಂದೆಂದೂ ಮಾಡಿರದಂಥ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇದೊಂದು ಪ್ರಯೋಗಾತ್ಮಕ ವಿಷಯದ ಸಿನಿಮಾ ಎಂದಿದ್ದಾರೆ.

ಕನ್ನಡದೊಂದಿಗೆ ತೆಲುಗು, ತಮಿಳು ಚಿತ್ರರಂಗದಲ್ಲಿಯೂ ಆಶಿಕಾ ಸಕ್ರಿಯರಾಗಿದ್ದಾರೆ. ಸದ್ಯ, ಸಿಂಪಲ್ ಸುನಿ ನಿರ್ದೇಶನದ ‘ಗತವೈಭವ’ ಸಿನಿಮಾ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದು, ಸಿದ್ಧಾರ್ಥ್ ಅವರ ಜೊತೆ ಆಶಿಕಾ ನಟಿಸಿರುವ ತಮಿಳು ಸಿನಿಮಾವೊಂದು ಬಿಡುಗಡೆಗೆ ಸಜ್ಜಾಗಿದೆ.

ಕನ್ನಡ ಹಾಗೂ ತಮಿಳಿನಲ್ಲಿ ಸಿನಿಮಾ ಆಫರ್‌ಗಳು ಬರುತ್ತಿದ್ದು, ಕಥೆಗಳನ್ನು ಕೇಳುತ್ತಿದ್ದಾರೆ. ಪಾತ್ರಗಳ ಬಗೆಗಿನ ತಮ್ಮ ನಿರೀಕ್ಷೆಗಳು ಗಟ್ಟಿಯಾಗಿದ್ದು, ನಿರ್ಧಾರ ತೆಗೆದುಕೊಳ್ಳಲು ಕೊಂಚ ಸಮಯ ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ■

